ಮೇಲೆ ಮಲಗಿ ಭೂಲೆ ಬಿಸರೆ ಗೀತ್ ಕೇಳುತ್ತಾ, ಕಿಟಕಿಯಿಂದ ಬರುತ್ತಿದ್ದ ತಂಗಾಳಿಗೆ ಮೈಯೊಡ್ಡಿ ಮಲಗುತ್ತಿದ್ದರೆ ಅದಾವ ಮಾಯದಲ್ಲಿ ನಿದ್ದೆಯೆನ್ನುವುದು ಕಳ್ಳಹೆಜ್ಜೆಯಿಡುತ್ತಾ ಬಂದು ಅಪ್ಪಿಕೊಳ್ಳುತ್ತಿತ್ತೋ ತಿಳಿಯುತ್ತಲೇ ಇರಲಿಲ್ಲ. ಆದರೆ ಅದೆಲ್ಲಾ ಈಗ ಕನಸು ನೋಡು. ಈ ವಿಶಾಲ ಪ್ರಪಂಚದಲ್ಲಿ ಬೆಂಗಳೂರೆಂಬ ಈ ಊರು ಸಣ್ಣದೊಂದು ಚುಕ್ಕಿಯಷ್ಟೇ. ಆದರೂ ಇಲ್ಲೇ ರಾತ್ರಿಯ ನಿಶ್ಯಬ್ದವಿಲ್ಲ. ಕತ್ತಲೆಂಬುದಿಲ್ಲಿ ಸಂಪೂರ್ಣವಾಗಿ ಈಗ ಆವರಿಸುವುದೇ ಇಲ್ಲ. ಅಲ್ಲೆಲ್ಲೋ ದೂರದ ಸರ್ಕಲ್‌ನಲ್ಲಿ ಬೆಳಗುವ ಸೋಡಿಯಮ್ ದೀಪಗಳು, ಧಾಳಾಗಿ ಉರಿಯುತ್ತಿರುವ ಬೀದಿ ದೀಪಗಳು, ನೈಟ್ ಶಿಫ್ಟ್ ಮುಗಿಸಿದವರನ್ನ ಸುರಕ್ಷಿತವಾಗಿ ಅವರವರ ಮನೆ ತಲುಪಿಸಲು, ಹೊಸ ಶಿಫ್ಟ್ ಪ್ರಾರಂಭಿಸುವವರನ್ನ ಅವರವರ ಕಾರ್ಯಸ್ಥಳಕ್ಕೆ ತಲುಪಿಸಲು ರಸ್ತೆಯ ಮೌನ ಸೀಳಿ ಅವುಗಳನ್ನೂ ನಿದ್ದೆಯಿಂದೆಬ್ಬಿಸಿ ಭರ್ರನೇ ಹರಿದಾಡುವ ಕ್ಯಾಬ್‌ಗಳು. ಯಾರು ಹೇಳಿದರೆ ಅಮ್ಮ ನಿನಗೆ ರಾತ್ರಿ ಜಗತ್ತು ನಿದ್ರಿಸುತ್ತದೆಂದು? ಪ್ರಣತಿ ಅಲ್ಲಿಲ್ಲದ ದೂರದ ಯಾವುದೋ ಲೋಕದಲ್ಲಿ ಇದ್ದಿರಬಹುದಾದ ಅಮ್ಮನಿಗೆ ಮನದಲ್ಲೇ ಕೇಳಿದಳು. ಗಂಟೆ ಆಗಲೇ ನಾಲ್ಕೂವರೆಯಾಗುತ್ತಾ ಬಂದಿದ್ದು, ಪಕ್ಕದ ಪ್ಲಾಟಿನಲ್ಲಾಗಲೇ ಅಡಿಗೆ ಮನೆಯ ಸದ್ದು ಕೇಳಿಸಲಾರಂಭಿಸಿತ್ತು. ಆರು ಗಂಟೆಗೆ ಮನೆ ಬಿಡುವ ಗಂಡನಿಗೆ ಆ ಗುಜರಾತಿ ಹೆಂಗಸು ರೋಟಿ, ಸಬ್ಜಿ ಎಂದು ಎಲ್ಲಾ ಸವರಿಸಿ ಡಬ್ಬಿ ಕಟ್ಟುವ ಗಡಿಬಿಡಿಯಲ್ಲಿದ್ದಾಳೆಂದು ಊಹಿಸಿದಳು ಪ್ರಣತಿ. ಸದ್ಯ, ರವಿ ಎಂಟಕ್ಕೆ ಹೊರಡುವುದರಿಂದ ಯಾವುದೇ ಅವಸರವಿಲ್ಲ ಎಂದು ಸಮಾಧಾನದ ಉಸಿರುಬಿಟ್ಟಳು. ಮಕ್ಕಳಿಬ್ಬರು ಕೆಲಸ, ಓದು ಎಂದು ಮೈಸೂರು, ಹೈದರಾಬಾದಿನಲ್ಲಿ ನೆಲೆಸಿದ ಮೇಲೆ ಪ್ರಣತಿಗೆ ಮನೆಗೆಲಸದ ಹೊರೆಯೂ ಕಡಿಮೆಯಾಗಿತ್ತು.ಇನ್ನೂ ಬೇಕಾದಷ್ಟು ಸಮಯವಿದೆ ಎಂದುಕೊಳ್ಳುತ್ತಲೆ ಮೈಮುರಿದವಳಿಗೆ ಮೊಬೈಲ್ ಕಾಣಿಸಿ ಮನಸ್ಸು ಬೇಡ ಬೇಡವೆನ್ನುತ್ತಿದ್ದರೂ ಫೇಸ್‌ಬುಕ್ ತೆಗೆದಳು... ಒಂದಷ್ಟು ಮೆಸೇಜುಗಳು ರಾಶಿ ಹಾಕಿದ ದಿನಪತ್ರಿಕೆಗಳಂತೆ ಬಂದು ಬಿದ್ದಿದ್ದವು. ತಾನಿಷ್ಟು ಹೊತ್ತಿನಲ್ಲಿ ಫೇಸ್‌ಬುಕ್ ತೆರೆದಿರುವುದು ಇನ್ನಾರಾದರೂ ಗಮನಿಸಿದರೆ ತನ್ನ ಬಗ್ಗೆ ಏನೆಂದುಕೊಂಡಾರೆನ್ನುವ ಅಳುಕು ಮನದಲ್ಲಿ ಕ್ಷಣ ಸುಳಿದರೂ ನನ್ನ ಮೊಬೈಲ್, ನನ್ನ ಸಮಯ, ನನ್ನ ಇಷ್ಟ ಅದಕ್ಕೇಕೆ ಹಿಂಜರಿಯಬೇಕೆಂದು ಮೆಸೆಂಜರ್ ಓಪನ್ ಮಾಡಿದಳು

ಎಲ್ಲಾ ನಿನ್ನೆ ರಾತ್ರಿ ಗೆಳೆಯ ಗೆಳತಿಯರು(ಹಾಗನ್ನಬಹುದಾದರೆ) ಕಳಿಸಿದ ಮೆಸೇಜುಗಳೇ. ಊಟ ಆಯಿತೆ? ಗುಡ್‌ನೈಟ್, ಏನು ಮಾಡುತ್ತಿದ್ದೀರಿ?... ಕಣ್ಣಾಡಿಸುತ್ತಿದ್ದಂತೇ ಫಕ್ಕನೆ ಹೊಸ ಮೆಸೇಜೊಂದು ಹಾರಿ ಬಂತು. 'ಹಾಯ್' ಪ್ರಣತಿಗೆ ಒಮ್ಮೆಲೇ ತನ್ನ ಈ ಮಬ್ಬು ಹರಿಯುವ ಮುನ್ನಿನ ಖಾಸಗಿ ಕ್ಷಣಗಳನ್ನು ಯಾರೋ ಗಮನಿಸುತ್ತಿದ್ದಾರೆಂದು ಭಯಂಕರ ಸಿಟ್ಟು ಬಂದಿತು. ವಿಕ್ರಮನದೆ ಮೆಸೇಜು. ಹೀಗೇ ಫೇಸ್‌ಬುಕ್ಕಿನಲ್ಲಿ ಪರಿಚಯವಾದವನು. ಆಗಾಗ ಚಾಟ್ ಮಾಡಲು ಒಂದರ ಹಿಂದೊಂದು ಸರಣಿ ಮೆಸೇಜುಗಳನ್ನ ಕಳಿಸುವುದು, ಪ್ರಣತಿ ಅವು ಯಾವುದಕ್ಕೂ ಉತ್ತರಿಸದೆ ನಿರ್ಲಕ್ಷಿಸುವುದೂ ಬಹಳ ದಿನಗಳಿಂದ ನಡೆದಿತ್ತು. ಈ ಬಗ್ಗೆ ಸೂರಜ್ ಬಳಿಯೂ ದೂರಿದ್ದಳು. "ನನ್ನಷ್ಟಕ್ಕೆ ನಾನು ಟೈಂ ಪಾಸ್ ಆಗಲೆಂದು ಫೇಸ್‌ಬುಕ್ ಓಪನ್ ಮಾಡಿದರೆ ಅದನ್ನೇ ಕಾಯುತ್ತಿದ್ದವರ ಹಾಗೆ ಕೆಲವರು ಚಾಟ್‌ಗೆ ಎಳೆಯಲು ಯಾಕೆ ಪ್ರಾರಂಭಿಸುತ್ತಾರೆ, ರೀ? ನಾನು ಉತ್ತರ ಕೊಡದೆ ಸುಮ್ಮನಾದರೂ ಬಿಡುವುದಿಲ್ಲ; ಮತ್ತೆ ಮತ್ತೆ ಮೆಸೇಜುಗಳನ್ನ ಮಾಡ್ತಾನೇ ಇರ್ತಾರೆ; ತುಂಬಾ ಕಿರಿಕಿರಿಯಾಗತ್ತೆ, ಏನು ಮಾಡೋದು" ಎಂದು ಕೇಳಿದಾಗ ಸೂರಜ್ ಅವಳ ಮುಗ್ಧತೆಗೆ ನಕ್ಕುಬಿಟ್ಟಿದ್ದ. "ನೋಡು ಪ್ರಣತಿ ಮರೀ, ಈ